# ಪಗಡೆ

ಉರಿಸಿಕೊಳ್ಳದುದು ದೀಪವಲ್ಲ
ಕೆತ್ತಿಸಿಕೊಳ್ಳದುದು ಮೂರ್ತಿಯಲ್ಲ
ಕಡೆಸಿಕೊಳ್ಳದುದು ನವನೀತವಲ್ಲ

ತುಳಿಸಿಕೊಳ್ಳದುದು ಹಾದಿಯಲ್ಲ
ನೆನೆಸಿಕೊಳ್ಳದುದು ರೆಪ್ಪೆಯಲ್ಲ
ಒಣಗಿಸಿಕೊಳ್ಳದುದು ಕಾಳಲ್ಲ

ತೂರಿಸಿಕೊಳ್ಳದುದು ತೆನೆಯಲ್ಲ
ಊಳಿಸಿಕೊಳ್ಳದುದು ಹೊಲವಲ್ಲ
ಕಟ್ಟಿಸಿಕೊಳ್ಳದುದು ಹೂಹಾರವಲ್ಲ

ಸವೆಸಿಕೊಳ್ಳದುದು ಗಂಧವಲ್ಲ
ಕರಗಿಸಿಕೊಳ್ಳದುದು ಕರ್ಪೂರವಲ್ಲ
ಮುಗಿದುಹೋಗದುದು ಮೇಣವಲ್ಲ

ಹುರಿಸಿಕೊಳ್ಳದುದು ಅರಳಲ್ಲ
ಸುಡಿಸಿಕೊಳ್ಳದುದು ಕಟ್ಟಿಗೆಯಲ್ಲ
ಮೀಟಿಸಿಕೊಳ್ಳದುದು ತಂತಿಯಲ್ಲ

ಬಡಿಸಿಕೊಳ್ಳದುದು ಲೋಹವಲ್ಲ
ದುಡಿಸಿಕೊಳ್ಳದುದು ದೇಹವಲ್ಲ
ಘಾಸಿಗೊಳ್ಳದುದು ಆತ್ಮವಲ್ಲ

ಬಾಳ ಹಾಸಿನಲ್ಲಿ ಎರಡೇ ದಾಳ
ಇರು ಮತ್ತು ಇಲ್ಲದೆಯೂ ಇರು



**• ವಾಸುದೇವ ನಾಡಿಗ್**

ಕಲೆ: ವಾಗೀಶ ಹೆಗಡೆ